ಅಧ್ಯಕ್ಷರು : ಇಲ್ಲ, ದಯವಿಟ್ಟು ಕ್ಷಮಿಸಿ, ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.ಐದು ಪ್ರಶ್ನೆಗಳನ್ನು ಒಂದು ಸಲ ಕೇಳಿದಿರಿ, ಮೂರು ಪ್ರಶ್ನೆಗಳನ್ನು ಇನ್ನೊಂದು ಸಲ ಕೇಳಿದಿರಿ,ಲೆಕ್ಕಾಚಾರ ಬೇಡವೆ? ಮಾನ್ಯ ಮಲ್ಲಿಕಾರ್ಜುನ್‌ರವರೇ ತಮ್ಮ ಪ್ರಶ್ನೆ ಕೇಳಿ.

ಕಡೂರು ತಾಲ್ಲೂಕಿನ ಮದಗದ ಕೆರೆ ಮತ್ತು ಅಯ್ಯನಕೆರೆ ಶಿಥಿಲಗೊಂಡಿರುವುದು

31 (121) ಶ್ರೀ ಮಲ್ಲಿಕಾರ್ಜುನ ಕೆ,ಬಿ (ಬೀರೂರು) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಮದಗದಕೆರೆ ಮತ್ತು ಅಯ್ಯನಕೆರೆ ಶಿಥಿಲ ಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ,ಕೆರೆ ದುರಸ್ತಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ; ದುರಸ್ತಿ ಗಾಗಿ ಎಷ್ಟು ಹಣ ವೆಚ್ಚವಾಗಲಿದೆ ;

ಇ. ಈ ಕಾಮಗಾರಿಗೆ ಹಣ ಬಿಡುಗಡೆ ಮಾಡಲಾಗಿದೆಯೇ; ಹಾಗಿದ್ದಲ್ಲಿ. ಯಾವಾಗ ಕಾಮಗಾರಿ ಕೈಗೊಳ್ಳಾಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ. ಬಂದಿದೆ.

ಆ.ಇ. ಮದಗದ ಕೆರೆ ಅಭಿವೃದ್ದಿಗಾಗಿ 40 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಹಾಗೂ ಅಯ್ಯನಕೆರೆ ಮತ್ತು ಅದರ ಸರಣಿ ಕೆರೆಗಳು ಆಧುನೀಕರಣ ಕಾಮಗಾರಿಗಾಗಿ 85.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ದಿನಾಂಕ : 25-2-2003 ರಂದು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. 2002 -03 ನೇ ಸಾಲಿನಲ್ಲಿ ಮದಗದಕೆರೆ ಅಭಿವೃದ್ದಿಗಾಗಿ 12 ಲಕ್ಷರೂ. ಹಾಗೂ ಅಯ್ಯನಕೆರೆ ಅಭಿವೃದ್ದಿಗಾಗಿ ಕಾಮಗಾರಿಗಾಗಿ 22 ಲಕ್ಷ ರೂ.ಗಳ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಈ ಕಾಮಗಾರಿಗೆ ತಾಂತ್ರಿಕ ಮಂಜುರಾತಿ ನೀಡಿ ಕಾಮಗಾರಿಗಳನ್ನು ಕೈಗೊಳ್ಳಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ.ಬಿ.ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೇ, ನಮ್ಮ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಮದಗದಕೆರೆ ಮತ್ತು ಅಯ್ಯನ ಕೆರೆ ಕಳೆದ ಮೂರು ವರ್ಷಗಳಿಂದ ಬಹಳಷ್ಟು ಶಿಥಿಲವಾಗಿದೆ. ಮಾನ್ಯ ಜಿಲ್ಲಾ ಸಚಿವರ ಮುಖಂಡತ್ವದಲ್ಲಿ ಕಳೆದಬಾರಿ ಹತ್ತು ಲಕ್ಷ ರೂಪಾಯಿ ಖರ್ಚು ಮಾಡಿ ರಿಪೇರಿ ಮಾಡಿದರೂ ಕೂಡ ಏನೂ ಉಪಯೋಗವಾಗಲಿಲ್ಲ. ಆದಾದಮೇಲೆ ನಾವು ಪ್ರಯತ್ನ ಮಾಡಿದಕ್ಕೆ ತಾವು ಮದಗದ ಕೆರೆಗೆ 40 ಲಕ್ಷ ರೂ ಮತ್ತು ಅಯ್ಯನಕೆರೆಗೆ 85 ಲಕ್ಷ ರೂಪಾಯಿಗಳಿಗೆ ಸರ್ಕಾರ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿದೆ. ಅದಕ್ಕಾಗಿ ನಾನು ನನ್ನ ಕ್ಷೇತ್ರದ ಜನರ ಪರವಾಗಿ ಮಾನ್ಯ ಸಣ್ಣ ನೀರಾವರಿ ಸಚಿವರಿಗೆ ಜಿಲ್ಲಾ ಸಚಿವರಿಗೆ ಮತ್ತು ಅಧಿಕಾರಿಗಳಿಗೆ ಪ್ರಥಮವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಇಲ್ಲಿ ಬರತಕ್ಕಂಥಾದ್ದು ಏನು ಎಂದರೆ ಮಾರ್ಚ್ 31 ನೇ ತಾರೀಕಿಗೆ ಈ ಕೆರೆ ಖಾಲಿಯಾಗುತ್ತದೆ. ಜೂನ್ ಎಂಟನೇ ತಾರೀಖಿನೊಳಗೆ ಕೆರೆಯ ರಿಪೇರಿ ಆಗಬೇಕು. ಎರಡು ತಿಂಗಳು ಅವಧಿಯಲ್ಲಿ ಕೆರೆಯ ರಿಪೇರಿ ಆಗದೇಹೋದರೆ ಮತ್ತೆ ರಿಪೇರಿ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಪ್ರತಿವರ್ಷವೂ ಕೆರೆ ತುಂಬಿಯೇ ತುಂಬುತ್ತದೆ. ಆ ಅಕ್ಟೋಬರ್ ತಿಂಗಳಲ್ಲಿ ಮಾತ್ರ ಅದು ತಂಬಲಿಲ್ಲ ಏಕೆಂದರೆ ನೀರು ಸೋರಿಹೋಗುತಿತ್ತು. ಈ ವರ್ಷ ಅದನ್ನು ತುರ್ತಾಗಿ ರಿಪೇರಿ ಮಾಡದೇ ಹೋದರೆ ಈ ಕೆರೆ

ಪೂರ್ತಿಯಾಗಿ ಒಡೆದು ಹೋಗತಕ್ಕಂಥ ವಾತಾವರಣ ಇದೆ. ಅದಕ್ಕೋಸ್ಕರ ಈಗ ಏನು ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಇದರ ಜತೆಗೆ ತಾಂತ್ರಿಕ ಮಂಜೂರಾತಿಯನ್ನು ಕೂಡ ನೀಡಿ ಈ ವರ್ಷವೇ ಈ ಕೆರೆಯ ಕೆಲಸವನ್ನು ಏಪ್ರಿಲ್ ಒಂದನೇ ತಾರೀಖಿನಿಂದ ಮಾಡುವುದಕ್ಕೆ ಅನುಮತಿಯನ್ನು ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಅವರು ಹೇಳಿದಹಾಗೆ ಅಯ್ಯನಕೆರೆಗೆ 85 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಆದರೆ ಒನ್‌ಥರ್ಡ್ ಗ್ರಾಂಟನ್ನು ಇದರಲ್ಲಿ ಇಟ್ಟು ಆಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೂಡ ಕೊಟ್ಟಿದ್ದೇವೆ. ಟೆಕ್ನಿಕಲ್ ಅಪ್ರೂವಲ್ ಕೊಟ್ಟು ಕೆಲಸ ಪ್ರಾರಂಭ ಮಾಡಿ ಪೂರ್ಣ ಮಾಡಬೇಕು ಎಂದರೆ ಸಂಪೂರ್ಣವಾದಂಥ ಹಣ ಬೇಕು. ಕೇವಲ ಒನ್‌ಥರ್ಡ್ ಹಣದ ಮೇಲೆ ಇದು ಪೂರ್ಣವಾಗಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸಂಪೂರ್ಣವಾಗಿ ಕೆಲಸ ಮುಗಿಯಬೇಕಾದರೆ ನಬಾರ್ಡಿನ ಸಹಾಯವನ್ನು ನಾವು ಕೇಳಿದ್ದೇನೆ. ಈಗಾಗಲೇ ಕ್ಯಾಬಿನೆಟ್ ಸಬ್‌ಕಮಿಟಿಯಲ್ಲಿ ಅಪ್ರೂವಲ್ ಆಗಿದೆ ಮತ್ತು ನರ್ಬಾಡಿಗೆ ಕೂಡ ನಾವು ಕಳುಹಿಸಿದ್ದೇವೆ. ಇದನ್ನು 20.9.2002 ರಂದು ನರ್ಬಾಡಿಗೆ ಕಳಿಸಿದ್ದು ನರ್ಬಾಡನ ಮಂಜೂರಾತಿಗಾಗಿ ನಾವು ಕಾಯುತ್ತಿದ್ದೇನೆ. ಅಲ್ಲಿಂದ ಲಿಸ್ಟ್ ಅಪ್ರೂವ್ ಆಗಿ ಬಂದಮೇಲೆ ಟೆಕ್ನಿಕಲ್ ಅಪ್ರೂವಲ್ ಕೊಟ್ಟು ಕೆಲಸ ಪ್ರಾರಂಭ ಮಾಡುವ ಹಾಗೆ ಮಾಡುತ್ತೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಸಭಾಧ್ಯಕ್ಷರೆ, ಇವತ್ತು ಪಕ್ಕದ ಕ್ಷೇತ್ರದ ಶಾಸಕರು ಪ್ರಶ್ನೆಯನ್ನು ಏನು ಕೇಳಿದ್ದಾರೆ, ಅದು ಬಹಳ ಅಮೂಲ್ಯವಾದ ಒಂದು ಪ್ರಶ್ನೆ. ಏಕೆಂದರೆ ಇಡೀ ರಾಜ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಈ ಮದಗದಕೆರೆ ಮತ್ತು ಅಯ್ಯನಕೆರೆ ಬಹಳ ದೊಡ್ಡಗಳಾಗಿವೆ. ಇವತ್ತು ಅಲ್ಲಿ ಬೋರ್‌ವೆಲ್‌ನಲ್ಲಿ ಏನಾದರೂ ನೀರು ಸಿಗುತ್ತಾ ಇದ್ದರೆ ಅದು ಕೆರೆಯಲ್ಲಿ ನೀರು ಭರ್ತಿಯಾದಾಗ ನೀರು ಸಿಗುತ್ತದೆ ಆ ಕೆರೆಗಳಲ್ಲಿ ನೀರು ಕಡಿಮೆ ಆಯಿತು ಎಂದರೆ ನಮ್ಮಲ್ಲಿ ಬೋರ್‌ವೆಲ್ ರಿಚಾರ್ಜಿಂಗ್ ಕೂಡ ಆಗುವುದಿಲ್ಲ. ಇದು ಸರ್ಕಾರ ಸ್ವಲ್ಪ ಗಂಭೀರವಾಗಿ ಪರಿಶೀಲನೆ ಮಾಡಬೇಕಾದಂಥ ವಿಚಾರ ಏಕೆಂದರೆ ನಬಾರ್ಡ್‌ನ್ ಹಣಕ್ಕೆ ಕಾದು ಮತ್ತೆ ಜುಲೈ ತಿಂಗಳೂ ಬಂತು ಎಂದರೆ ಮಳೆಗಾಲ ಬರುತ್ತದೆ. ಮಳೆಗಾಲದಲ್ಲಿ ಕೆರೆಗಳ ಕಾಮಗಾರಿಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಬೇರೆಯಾವುದಾದರೂ ಬಾಬಿನಲ್ಲಿ ಹಣ ಉಳಿತಾಯವಾಗಿದ್ದರೆ ಅದನ್ನು ಇದಕ್ಕಾಗಿ ಇಟ್ಟು ತಾಂತ್ರಿಕ ಅನುಮೋದನೆಯನ್ನು ನೀಡಿದರೆ ಕೆರೆಯಲ್ಲಿ ನೀರು ಉಳಿದ ಬೋರ್‌ವೆಲ್‌ಗಳಲ್ಲಿ ನೀರು ಇರುತ್ತದೆ. ಏನು ನಮ್ಮ ಕಡೂರು ತಾಲ್ಲೂಕಿನಲ್ಲಿ 38 ಕೆರೆಗಳು ಇವೆ, ಅವುಗಳಲ್ಲಿ ಕೂಡ ನೀರು ಇರಲಿಕ್ಕೆ ಸಾಧ್ಯವಾಗುತ್ತದೆ. ನಾನು ಕಳೆದ ವರ್ಷ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಇದರ ಬಗ್ಗೆ ಸೆಳೆದಿದ್ದೆ.ಅದಕ್ಕೆ ಮುಖ್ಯಮಂತ್ರಿಗಳು ನಾನು ಮಾಡಿಸಿಕೊಡುತ್ತೇನೆ ಎಂದು ಭರವಸೆಯನ್ನು ನೀಡಿದ್ದರು. ಆದರೆ ಇವತ್ತು ಏನಾಗಿದೆ ಎಂದರೆ ಬರಗಾಲ ಬಂದಿದೆ ಮತ್ತು ಕೆರೆಯಲ್ಲಿ ನೀರು ಖಾಲಿಯಾಗಿದೆ. ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೆಚ್ಚಿನ ಗಮನ ಕೊಟ್ಟು ಇದನ್ನ ಬಹಳ ಗಂಭೀರವಾಗಿ ಪರಿಗಣಿಸಿ ಈ ಬರಗಾಲದಲ್ಲಿ ಆ ಕೆಲಸವನ್ನು ಮಾಡಿದರೆ ನಮಗೆ ಕುಡಿಯುವ ನೀರಿನ ವ್ಯವಸ್ಥೆಗೆ ಅನುಕೂಲವಾಗುತ್ತದೆ. ಈಗ ನಮಗೆ ನೀರಾವರಿಗಿಂತ ಕುಡಿಯುವ ನೀರಿನ ಅವಶ್ಯಕತೆ ಬಹಳವಾಗಿದೆ. ಅದ್ದರಿಂದ ಮಾನ್ಯ ಸಚಿವರಿಗೆ ಇದನ್ನು ಕೊಡಲೇ ಮಾಡಬೇಕೆಂದು ತಮ್ಮ ಮುಖಾಂತರ ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದನ್ನು ಬಹಳ ಗಂಭೀರವಾಗಿ ಆಲೋಚನೆ ಮಾಡಿಯೇ ಇದನ್ನ ಪೂರ್ತಿಗೊಳಿಸಬೇಕೆಂದು ಹೇಳಿಯೇ ನಬಾರ್ಡಿಗೆ ಕಳುಹಿಸಿದ್ದು. ಇದನ್ನು ನಾವು ಪೂರ್ತಿಮಾಡಬಾರದು ಎನ್ನತಕ್ಕಂಥ ನಮ್ಮ ಇಚ್ಛೆ ಇದ್ದಿದ್ದರೆ ಇದೆಲ್ಲ ಅಂದಾಜು ಪಟ್ಟಿ ತಯಾರು ಮಾಡಿ ಕ್ಯಾಬಿನೆಟ್ ಸಬ್‌ಕಮಿಟಿಯಲ್ಲಿ ಅಪ್ರೂವ್ ಮಾಡಿಸಿ ನಬಾರ್ಡಿಗೆ ಕಳುಹಿಸುತ್ತಿದ್ದೆವಾ? ಅಲ್ಲಿಗೆ ಕಳುಹಿಸಿ ಸಂಪೂರ್ಣವಾದಂಥ ಹಣವನ್ನು ತರಿಸಿಕೊಂಡು ಈ ಕೆರೆಗಳನ್ನು ದುರಸ್ತಿ ಮಾಡಬೇಕೆಂದು ಮುಖ್ಯಮಂತ್ರಿಗಳು ಏನು ಮಾತನ್ನು ಇಲ್ಲಿ ಹೇಳಿದ್ದರು, ಅದಕ್ಕೆ ಅನುಗುಣವಾಗಿ ಈ ಕ್ರಮವನ್ನು ನಾವು ತೆಗೆದುಕೊಂಡಿರುವುದು. ಅಲ್ಲಿಂದ ಬಂದ ತಕ್ಷಣ ಮುಂದಿನ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಏಕೆಂದರೆ ಈಗ ಇರತಕ್ಕಂಥ 12 ಲಕ್ಷರೂ ಹಣದಲ್ಲಿ ಕೆಲಸ ಪೂರ್ತಿ ಮಾಡುವುದಕ್ಕೆ ಆಗುವುದಿಲ್ಲ. ಒಂದು ಕೋಟಿ ಎಂಬತ್ತೈದು ಲಕ್ಷ ರೂಪಾಯಿಗಳನ್ನು ಒದಗಿಸಿ ಇದನ್ನು ಪೂರ್ತಿಗೊಳಿಸುವುದು ಸಧ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ತಮಗೆ ಗೊತ್ತಿರುವಂತೆ ಪೆಂಡಿಂಗ್ ಬಿಲ್‌ಗಳೇ ಇನ್ನೊರು ಕೋಟಿಯಷ್ಟು ಇದೆಯೆಂದು ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಆದ್ದರಿಂದ ಉಳಿತಾಯದ ಪ್ರಶ್ನೆ ಬರುವುದಿಲ್ಲ. ಆದ್ದರಿಂದ ಇದನ್ನು ಈಗಾಗಲೇ ನಾವು ನಬಾರ್ಡಿಗೆ ಕಳಿಸಿದ್ದೇವೆ. ಯಾವುದಾದರೂ ರೀತಿಯಲ್ಲಿ ಈ ಕಲಸವನ್ನು ಮುಗಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಈ ಕೆಲಸವನ್ನು ತೆಗೆದು ಕೊಂಡಿದ್ದೇವೆ. ಅದು ಅಪ್ರೊಪ್ ಆಗಿ ಬಂದ್‌ತಕ್ಷಣವೇ ಇದನ್ನು ಬರಗಾಲದಲ್ಲೋ ಅಥವಾ ಟ್ರಾನ್ಸಫರೆನ್ಸಿ ಆಕ್ಟ್‌ನ್ನು ಎಕ್ಸಂಪೆಶನ್ ಮಾಡಿಯೋ ಯಾವ ರೀತಿಯಾಗಿ ತೆಗೆದು ಕೊಳ್ಳಬೇಕು ಎನ್ನತಕ್ಕಂಥಾದ್ದನ್ನು ಮುಂದೆ ಪರಿಶೀಲನೆ ಮಾಡಿ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಬಿ. ಮಲ್ಲಿಕಾರ್ಜುನ್ : ಮಾನ್ಯ ಅಧ್ಯಕ್ಷರೆ. ಅವರು ಹೇಳಿರತಕ್ಕದ್ದು ಎಲ್ಲವೂ ಸತ್ಯ. ಇದು ಏನಾಗಿದೆ ಎಂದರೆ ನಮ್ಮಕಡೆ ಒಂದು ಗಾದೆಮಾತಿದೆ ,ಶ್ರೀಮಂತ ಕಂತೆ ತೆಗೆಯುವುದರೊಳಗೆ ಬಡವ ಸತ್ತುಹೋದ ಎಂದು. ಇದು ನಬಾರ್ಡ್‌ನಿಂದ ಅಪ್ರೊವ್ ಆಗಿ ಬರುವುದರೊಳಗೆ ಕೆರೆಒಡೆದುಹೋಗಿರುತ್ತದೆ. ಅದನ್ನು ಮನಗಂಡು ದಯಮಾಡಿ ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು ಈಗಾಗಲೇ ನಮ್ಮಹತ್ತಿರ 34 ಲಕ್ಷ ರೂಪಾಯಿ ಇದೆ. ಕೆಲಸ ಪ್ರಾರಂಭ ಮಾಡಲಿ ಅನುಮತಿಯನ್ನು ಕೊಡಿ. ಎಲ್ಲಾ ಕೆಲಸವನ್ನು ಪೂರ್ತಿಯಾಗಿ ಹಣ ಇಟ್ಟು ಏನೂ ಪ್ರಾರಂಭ ಮಾಡುವುದಿಲ್ಲ. ಈಗ ಮೂರನೇ ಒಂದು ಭಾಗ ಗ್ರಾಂಟ್ ಇದೆ. ಕೆಲಸ ಶುರುಮಾಡಲಿ. ಮುಂದಿನವರ್ಷದಲ್ಲಿ ಬೇಕಾದಂಥ ಹಣವನ್ನು ಒದಗಿಸಿಕೊಟ್ಟರೆ ಆಯಿತು. ಇಲ್ಲದಿದ್ದರೆ ಕೆರೆ ಒಡೆದುಹೋಗುತ್ತದೆ. ದಯಮಾಡಿ ಇದನ್ನು ಪರಿಶೀಲನೆ ಮಾಡಿ ತಾಂತ್ರಿಕ ಮಂಜೂರಾತಿಯನ್ನು ಕೊಟ್ಟು ಕೆಲಸವನ್ನು ಪ್ರಾರಂಭ ಮಾಡಲಿಕ್ಕೆ ತಾವು ಅನುಮೊದನೆಯನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿ ಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ನಾನು ಮಾನ್ಯ ಮಂತ್ರಿಗಳ ಗಮನಸೆಳೆಯುತ್ತಿದ್ದೇನೆ. ಈಗಾಗಲೇ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಈಗ ಕೆರೆಯಲ್ಲಿ ನೀರಿಲ್ಲ. ಕಳೆದ ವರ್ಷ ಬಿದ್ದಂಥ ವಾಡಿಕೆ ಮಳೆಯಾಗಲಿ.ಪ್ರಮಾಣದ ಮಳೆಯಾಗಲಿ ಬಹಳ ಕಡಿಮೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಮಲೆನಾಡಿನಲ್ಲೇ ಈ ಪರಿಸ್ಥಿತಿಯಾದರೇ ಬೇರೆ ಜಿಲ್ಲೆಗಳಲ್ಲಿ ಪರಿಸ್ಥಿತಿಯನ್ನು ಹೇಗೆ ಎದುರಿಸಬೇಕು ಎಂದು ಅವರು ಒಂದು ಸಂದರ್ಭದಲ್ಲಿ

ನನ್ನ ಹತ್ತಿರ ಮಾತನಾಡಿದ್ದರು. ಆದ್ದರಿಂದ ಈಗ ಏನಾಗಿದೆ ಎಂದರೆ ಇದು ಬಹಳ ಸೂಕ್ತವಾದ ಸಮಯ. ಆಕಸ್ಮಿಕವಾಗಿ ಅರ್ಧಮಟ್ಟದ ನೀರು ಬಂದರೂ ಕೂಡ ಕೆಲಸವನ್ನು ಮುಂದೆ ಪ್ರಾರಂಭ ಮಾಡುವುದಕ್ಕೆ ಆಗುವುದಿಲ್ಲ. ಆಕಸ್ಮಿಕವಾಗಿ ಮುಂದಿನ ವರ್ಷ ಮಳೆ ಚೆನ್ನಾಗಿ ಆಯಿತು ಅಂದರೆ ಆ ಕೆರೆ ಒಡೆದು ಹೋಗುತ್ತದೆ. ಆದರಿಂದ ಬಹಳ ಅನಾಹುತ ವಾಗುತ್ತದೆ ರೈತರಿಗೆ. ಈಗ ಏನು ಅನುಮತಿಯನ್ನು ಕೊಟ್ಟಿದ್ದಾರೆ ಅದನ್ನು ದಯವಿಟ್ಟು ಮಾನ್ಯ ಮಂತ್ರಿಗಳು ಅನುಮತಿಯನ್ನು ಕೊಟ್ಟರೆ ಕೆಲಸ ಪ್ರಾರಂಭ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ. ಇದನ್ನು ಇರತಕ್ಕಂಥ ಹಣದಲ್ಲಿಯೇ ಅವರು ಕೆಲಸ ಪ್ರಾರಂಭ ಮಾಡಿ ಎಂದು ಹೇಳುತ್ತಾರೆ. ಅದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಕೆ. ಬಿ. ಮಲ್ಲಿಕಾರ್ಜುನ್ : ಮಾನ್ಯ ಅಧ್ಯಕ್ಷರೆ ದಯವಿಟ್ಟು ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ ಇದನ್ನು ಪರಶೀಲನೆ ಮಾಡುವುದು ಬೇಡ.ಇದು ಆಗುವುದಿಲ್ಲ ಏಕೆಂದರೆ ಕಡೂರು ತಾಲ್ಲೂಕು ಬಹಳ ಹೀನ ಸ್ಥಿತಿಗೆ ಬರುತ್ತದೆ ಈ ಎರಡು ಕೆರೆಗಳು ಒಡೆದು ಹೋದರೆ, ಪರಿಶೀಲನೆ ಮಾಡುವುದು ಬೇಡ. ಈಗ ಮಾಡಿಸಿ ಕೊಡಲಿ ನಮ್ಮ ಜಿಲ್ಲೆಯ ಮಾನ್ಯ ಜಿಲ್ಲಾ ಸಚಿವರು ಹೇಳಬೇಕಾಗುತ್ತದೆ. ಈ ಎರಡೂ ಕೆರೆಗಳು ನಮಗೆ ಜೀವನಾಡಿ. ಇದು ಇಲ್ಲ ಅಂದ್ರೆ ನಾವು ಇಲ್ಲ. ಈಗಾಗಲೇ 34 ಲಕ್ಷ ರೂಪಾಯಿಗಳ ಕೆಲಸ ಪ್ರಾರಂಭ ಮಾಡಿ ಮುಂದೆ ಹಣ ಕೊಡುತಕ್ಕಂಥಾದ್ದು ಆಗುತ್ತದೆ. ಆದ್ದರಿಂದ ಪರಿಶೀಲನೆ ಮಾಡುತ್ತೇನೆಂದು ಮಾನ್ಯ ಹಿರಿಯ ಸಚಿವರು ಹೇಳಬಾರದು. ಕೆಲಸ ಪ್ರಾರಂಭ ಮಾಡುವುದಕ್ಕೆ ದಯಮಾಡಿ ಅನುಮತಿಯನ್ನು ಕೊಡಿ.

ಶ್ರೀ ಕೆ. ಎಂ.ಕೃಷ್ಣ ಮೂರ್ತಿ : ಜಿಲ್ಲಾ ಸಚಿವರು ಮಧ್ಯೆ ಪ್ರವೇಶ ಮಾಡಬೇಕು ಹೋದ ಸಾರಿ ಬರಗಾಲದಲ್ಲಿ 11 ಲಕ್ಷ ರೂ ಕೊಟ್ಟಿದ್ದಾರೆ .

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ಹೇಳಿದ ಹಾಗೆ ನಬಾರ್ಡ್‌ಗೆ ಸರ್ಕರ ಕಳುಹಿಸಿದೆ.ತಮಗೂ ಗೊತ್ತಿದೆ ನಬಾರ್ಡ್‌ಗೆ ಯಾವುದೇ ಪ್ರಸ್ತಾವನೆಯನ್ನು ಸರ್ಕಾರ ಕಳುಹಿಸಿದರೆ ಅದು ಅನುಮತಿಯಾಗಿ ಬರುತ್ತದೆ. ಅದು ಬರುವವರೆಗೂ ತಾವು ಕಾಯುವುದಿಲ್ಲವೆಂದರೆ ಹೇಗೆ? ಏಕೆಂದರೆ ಇದೇ ಪರಿಸ್ಥಿತಿ ಇಡೀ ರಾಜ್ಯದಲ್ಲಿದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಮಾನ್ಯ ಅಧ್ಯಕ್ಷರೆ ಆ ಕೆರೆ ಒಡೆದು ಹೋದರೆ 5 ಕೋಟಿ ರೂ ಅಲ್ಲ 10 ಕೋಟಿ ರೂ ಖರ್ಚು ಮಾಡಿದರೂ ಅದು ರಿಪೇರಿ ಆಗುವುದಿಲ್ಲ.ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ನಮ್ಮ ಬಗ್ಗೆ ಸ್ವಲ್ಪ ಶಿಫಾರಸ್ಸು ಮಾಡಬೇಕು.

ಶ್ರೀ ಮಲ್ಲಿಕಾರ್ಜುನ್ ಖರ್ಗೆ : ನಬಾರ್ಡ್‌ನಿಂದ ಅಪ್ರೂವ್ ಆಗಿ ಬರಬೇಕು ಬಂದ ತಕ್ಷಣ ಮಾಡಿ ಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಮಾನ್ಯ ಅಧ್ಯಕ್ಷರೆ, ಅಂಟಿಸಿಪೇಶನ್ ಅಂತ ಮಾಡಿ ಕೊಡುವುದಕ್ಕೆ ಹೇಳಿ.

ಶ್ರೀ ಕೆ. ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ ಕಳೆದ ವರ್ಷ ನಾವು ಬರಗಾಲದಲ್ಲಿ 10 ಲಕ್ಷ ರೂ ಖರ್ಚು ಮಾಡಿದ್ದೇವೆ.